ಶ್ರೀ ಎಸ್. ಎಂ. ಸೀರನಾಳಿಚಂದ್ರಶೇಖರ್.—ಈಗ ಶಿವಮೊಗ್ಗದಲ್ಲಿ ಕಬ್ಬನ್ನು ಹೇರಳವಾಗಿ ಬೆಳೆಯುತ್ತಿದ್ದಾರೆ. ಆದ್ದರಿಂದ ಈಗ ಇರತಕ್ಕ ನಕ್ಕರೆ ಕಾರ್ಖಾನೆಯವರು ರೈತರಿಂದ ಬರತಕ್ಕ ಕಬ್ಬನ್ನು ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಆದಕಾರಣ ಅಲ್ಲ ಇನ್ನೊಂದು ನಕ್ಕರೆ ಕಾರ್ಖಾನೆಯನ್ನು ತುರ್ತಾಗಿ ಕೊಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಈಗ ನಾವು ಹೊಸದಾಗಿ 10 ನಕ್ಕರೆ ಕಾರ್ಖಾನೆಯನ್ನು 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ಥಾಪನೆಮಾಡುವುದಕ್ಕೆ ಕೇಂದ್ರ ಸರ್ಕಾರವನ್ನು ಕೇಳ ಬೇಕು ಎಂದು ನಿರ್ಧಾರ ಮಾಡಿದ್ದೇವೆ. ಅದಕ್ಕಾಗಿ ಅದು ಫೀಜಬಲ್ ಇದೆಯೇ ಹೇಗೆ ಎಂಬುದನ್ನು ಅಧ್ಯಯನ ಮಾಡುವುದಕ್ಕೆ ಸರ್ಕಾರದ ಮಟ್ಟದಲ್ಲಿ ಒಂದು ಸಣ್ಣ ಅಧಿಕಾರಿಗಳ ಸಮಿತಿಯನ್ನು ನೇಮಿಸಿದ್ದೇವೆ. ಶಿವಮೊಗ್ಗ ಜಿಲ್ಲೆಯಲ್ಲ ಇನ್ನೊಂದು ನಕ್ಕರೆ ಕಾರ್ಖಾನೆಯ ಅವಶ್ಯಕತೆ ಇದ್ದರೆ ಆಗಬಹುದು.

ಶ್ರೀ ಆರ್. ಎಸ್. ಪಾಟೀಲ್.—ಕಬ್ಬಿನ ಬೆಲೆಯನ್ನು ಕೇಂದ್ರಸರ್ಕಾರದವರು ನಿಗದಿ ಮಾಡಿದ ಮೇಲೆ ಇಡೀ ರಾಜ್ಯದಲ್ಲ ನಕ್ಕರೆ ಕಾರ್ಖಾನೆಗಳ ಕ್ಷೇತ್ರದಲ್ಲಿ ಬರತಕ್ಕ ಕಬ್ಬು ಬೆಳೆಗಾರರಿಗೆ ಒಂದೇ ದರ ಕೊಡಬೇಕಾಗುತ್ತದೆ. ಬೆಳಗಾಂನ ಹಿರಣ್ಯಕೇಶಿ ಸುಗರ್ ಕಾರ್ಖಾನೆಯವರು 100 ರೂಪಾಯಿ ಕೊಟ್ಟು ಟ್ರಾನ್ಸ್‌ಪೋರ್ಟೇಶನ್ ನೋಡಿಕೊಳ್ಳುತ್ತಿದ್ದಾರೆ. ಅಲ್ಲಯೇ ಮುಧೋಳ್‌ನಲ್ಲರುವ ನೋಮಯ್ಯ ನಕ್ಕರೆ ಕಾರ್ಖಾನೆಯವರು 130 ರೂಪಾಯಿ ಕೊಟ್ಟು ಟ್ರಾನ್ಸ್‌ಪೋರ್ಟೇಶನ್ ಮಾತ್ರ, ಕಟ್ಟಿಂಗ್ ಚಾರ್ಜಸ್ ಸಹ ಕೊಡುತ್ತಿದ್ದಾರೆ. ಆದ್ದರಿಂದ ಸಹಕಾರಿ ರಂಗದಲ್ಲಿರುವ ಕಾರ್ಖಾನೆಯಲ್ಲಿ 100 ರೂಪಾಯಿ ಮಾತ್ರ ಏಕೆ ಕೊಡುತ್ತಿದ್ದಾರೆ; ಹೆಚ್ಚು ಕೊಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಸ್. ಎಂ. ಕೃಷ್ಣ.—ಕಬ್ಬಿನ ಬೆಲೆ ಇಳುವರಿಯ ಮೇಲೆ ತೀರ್ಮಾನ ಆಗತಕ್ಕದ್ದು. ಕೇಂದ್ರಸರ್ಕಾರದವರು ಕನಿಷ್ಠ ಬೆಲೆಯನ್ನು ನಿಗದಿ ಮಾಡಿದ್ದಾರೆ. ಸಾಧಾರಣವಾಗಿ ಎಲ್ಲಾ ನಕ್ಕರೆ ಕಾರ್ಖಾನೆಗಳು ಅದಕ್ಕಿಂತಲೂ ಹೆಚ್ಚು ಕೊಡುತ್ತಿದ್ದಾರೆ. ಮುಧೋಳನಲ್ಲರುವ ಕಾರ್ಖಾನೆ ಹೆಚ್ಚು ಕೊಡಬೇಕಾದರೆ ಅಲ್ಲಿಯ ಕಬ್ಬಿನ ಇಳುವರಿ ಜಾಸ್ತಿ ಬಂದಿರಬೇಕು ; ಅದನ್ನು ಕಬ್ಬು ಬೆಳೆಗಾರರಿಗೆ ಹಂಚಿದ್ದಾರೆ.

ಶ್ರೀ ಕೆ. ಸೂರ್ಯನಾರಾಯಣ ಗೌಡ.—ಈಗ ಬೆಂಗಳೂರು ಜಿಲ್ಲೆಯಲ್ಲಿ ಇದುವರೆಗೂ ಒಂದು ನಕ್ಕರೆ ಕಾರ್ಖಾನೆ ಸಹ ಆಗಲಿಲ್ಲ. ಮುಂದೆ ಕೇಂದ್ರದಿಂದ ಸ್ಯಾಂಕ್ಷನ್ ಆಗತಕ್ಕ ಕಾರ್ಖಾನೆಗಳಲ್ಲಿ ಒಂದನ್ನು ಬೆಂಗಳೂರು ಜಿಲ್ಲೆಗೆ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಅದನ್ನು ಪರಿಶೀಲನೆ ಮಾಡುತ್ತೇವೆ.

Distribution of Sugar and Foodgrains to Public in Ranebennur Town

465. **Sri K. B. KOLIWAD** (Ranebennur).—

Will the Minister of State for Food and Civil Supplies be pleased to state :—

(*a*) the population of Ranebennur Town ;

(*b*) the number of persons to whom sugar is distributed in Ranebennur Town ;

(*c*) the Officer in charge of distribution resposible for it ;

(*d*) the procedure adopted by Government in arranging distribution of sugar and foodgrains to people through retailers ?

Smt. E. E. VAZ (Minister of State for Food and Civil Supplies).—

(*a*) 40,749 (1971 Census).

(*b*) 82,880 persons living in Ranebennur Town and the adjoining extensions.

(*c*) The Tahsildar, Ranebennur.

(*d*) Allotment of sugar and foodgrains to Taluks is made by the Deputy Commissioners on receipt of district allotments from the Director of Food and Civil Supplies. The Tahsilders will in turn issue permits to the retailers on the basis of the card-population, and according to the stocks available for issue to the card-holders according to the approved scale. The retailers lift the stocks from the wholesalers. The Tahsildars and the circle Staff supervise the distribution.

ಶ್ರೀ ಕೆ. ಜಿ. ಕೋಳಿವಾಡ್.—ರಾಣಿಬೆನ್ನೂರು ಟೌನಿನ ಜನಸಂಖ್ಯೆ 40749 ಎಂದು ಹೇಳಿದ್ದೀರಿ. ಕಾರ್ಡುಗಳು ಸುಮಾರು 82880 ಎಂದು ಹೇಳಿದ್ದೀರಿ. ಅಂದರೆ ಸುಮಾರು 42 ಸಾವಿರ ಚಿಲ್ಲರೆ ಬೋಗಸ್ ಕಾರ್ಡುಗಳು ಇವೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀಮತಿ ಇ.ಇ. ವಾಜ್.—ಸರ್ಕಾರದ ಗಮನಕ್ಕೆ ಬಂದಮೇಲೆ ರಾಣಿಬೆನ್ನೂರ್ ತಾಹಸೀರ್ದಾರವರಿಗೆ ಆದೇಶ ಕಳಿಸಿ ಹೊಸ ಕಾರ್ಡುಗಳನ್ನು ಮನೆ ಮನೆಗೆ ಹೋಗಿ ಚಕ್‌ಅಪ್ ಮಾಡಿ ಇಶ್ಯೂ ಮಾಡಬೇಕೆಂದು ಏರ್ಪಾಡು ಮಾಡಿದ್ದೇವೆ.

ಶ್ರೀ ಕೆ. ಜಿ. ಕೋಳಿವಾಡ್.—ಎಷ್ಟು ದಿವಸಗಳಲ್ಲಿ ಇದನ್ನು ಮಾಡಿ ಮುಗಿಸುತ್ತೀರಿ ?

ಶ್ರೀಮತಿ ಇ. ಇ. ವಾಜ್.—ಆದಷ್ಟು ಜಾಗ್ರತೆ ಮಾಡಿ ಮುಗಿಸುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್.—ಬೋಗಸ್ ಕಾರ್ಡುಗಳು ಇವೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಈ ರೀತಿ ಬೋಗಸ್ ಕಾರ್ಡುಗಳು ಹುಟ್ಟುವುದಕ್ಕೆ ಕಾರಣವಾದರೂ ಏನು ಮತ್ತು ಆ ರೀತಿ ಆಗುವುದಕ್ಕೆ ಕಾರಣರಾದವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಬೋಗಸ್ ಕಾರ್ಡುಗಳಿಗೆ ಜನರೇ ಕಾರಣ. ಉದಾಹರಣೆಗೆ ಮನೆಗಳಲ್ಲಿ ನಾಲ್ಕು ಜನರು ಇದ್ದರೆ, 8 ಜನ ಎಂದು ಫೀಗರ್ಸ್ ಹೇಳುತ್ತಾರೆ. ಅದಕ್ಕಾಗಿ ಅದನ್ನು ಚೆಕ್‌ಮಾಡಿ ಹೊಸ ಕಾರ್ಡುಗಳನ್ನು ಈಗ ಕೊಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ನೆನ್ಸಸ್ ಲೆಕ್ಕದ ಪ್ರಕಾರ ಅಲ್ಲಿ 40 ಸಾವಿರ ಚಿಲ್ಲರೆ ಜನಸಂಖ್ಯೆ ಇದೆ. ಆದರೆ ಕಾರ್ಡುಗಳು ಕೊಟ್ಟಿದ್ದು 82 ಸಾವಿರ ಚಿಲ್ಲರೆ. ಅಂದರೆ ಒಂದಕ್ಕೆ ಎರಡರಷ್ಟು ಆಯಿತು. ಇಂಥ ಪರಿಸ್ಥಿತಿ ರಾಜ್ಯಾದ್ಯಂತ ಇರುವುದರಿಂದ ಅವುಗಳನ್ನು ಗಮನಿಸಿ. ಅಂಥದ್ದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಉಗ್ರ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಇ. ಇ, ವಾಜ್,—ಮಾನ್ಯ ಸದಸ್ಯರೆಲ್ಲರ ಸಹಕಾರ ಇದ್ದರೆ ಖಂಡಿತವಾಗಿಯೂ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸದಸ್ಯರ ಸಹಕಾರ ಕೇಳಿದರೆ ಕೊಡುವುದಿಲ್ಲವೆಂದು ಹೇಳುತ್ತಾರೆಯೇ ?

ಶ್ರೀಮತಿ ಇ. ಇ. ವಾಜ್.—ಇದು ಹಿಂದಿನ ಸರ್ಕಾರ ಮಾಡಿದ್ದು. ಈಗ ಹೊಸ ಕಾರ್ಡು ಇಶ್ಯೂ ಮಾಡುತ್ತಿದ್ದೇವೆ.

ಶ್ರೀ ಕೆ. ಜಿ. ಕೋಳಿವಾಡ್.—ರಾಣಿಬೆನ್ನೂರು ನಗರದಲ್ಲಿ ಸುಮಾರು 42 ಸಾವಿರ ಜನರಿದ್ದಾರೆ. ಅಲ್ಲಿ ಸುಮಾರು 72 ರಿಜ್ಯೆಲರ್ಸ್ ಅಂಗಡಿ ಇವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಸರ್ಕಾರದ ನಿಯಮದ ಪ್ರಕಾರ ರಿಜ್ಯೆಲರ್ಸನ್ನು ಆರಿಸುವಾಗ ಕೋಆಪರೇಟಿವ್‌ಗಳಿಗೆ ಹೆಚ್ಚು ಗಮನ ಕೊಡಬೇಕೆಂದು ಇಲ್ಲವೇ ?

ಶ್ರೀಮತಿ ಇ. ಇ. ವಾಜ್.—ಅಲ್ಲಿ 70 ಟಿಲ್ಲರೆ ರಿಚ್ಯೆಲ್ ಡೀಲರ್ ಇದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆ. ಈಗ ಅಪ್ಲೈ ಬೇಕಾಗಿಲ್ಲವೆಂದು 55 ಮಾತ್ರ ಅರಿಸಿದ್ದೇವೆ, ಅದರಲ್ಲಿ 25 ಕೋಆಪರೇಟಿವ್ಸ್‌ಗಳಿಗೆ ಕೊಡುವ ಏರ್ಪಾಡು ಮಾಡಿದ್ದೇವೆ.

NRWS Schemes In Afzalpur Taluk

486 Sri D. B. KALMANKAR (Afzalpur).—

Will the Minister for Community Development and Social Welfare be pleased to state :—

(*a*) the number of N. R. W. S. Schemes sanctioned in the current year in Afzalpur taluk out of the villages which have paid 10 per cent of contribution. (Give the names of villages sanctioned and not sanctined);

(*b*) the names of the villages which have not paid public contribution

(*c*) whether the Government will take up N.R.W.S. Schemes in such villages which have not paid contribution in view of the acunte scarcity of dri king water in Afzalpur Taluk and meet the contribution from the L.R. grant ?

Sri M. MALLIKARJUNA SWAMY (Minister for Communtiy Development and Social Welfare).—

(*a*) Nil.

(*b*) 1. Shivoor
2. Chowdapur
3. Chincholi
4. Niloor
5. Moshal
6. Station Gangapur
7. Hoovenahaalli

(*c*) Yes. Orders are issued in G.O. No. DPC 79 VRW 73 dsted 5th March 1973, directing that water supply schemes should be taken up in the acute scarcity affected areas, irrespective of the fact whether the 10 per cent contribution is paid or not by the panchayats concerned.

Sri D. B. KALMANKAR.—May I bring to your notice that Chowdapur and Niloor have been sanctioned and some more villages which have made contribution are to be sanctioned ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕಂಟ್ರಿಬ್ಯೂಶನ್ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಯಾವ ಪಂಚಾಯತಿಯಾಗಲಿ, ಕಂಟ್ರಿಬ್ಯೂಶನ್ ಕೊಟ್ಟಿಲ್ಲ. ಒಂದೇ ಒಂದು ನೀಲೂರು ಪರಿಚಾಯತಿ ನುಮಾರು 10 ಸಾವಿರ ರೂಪಾಯಿ ಕಂಟ್ರಿಬ್ಯೂಶನ್ ಕೊಟ್ಟಿದೆ. ಜೊತೆಗೆ ಅದು ಅಕ್ಯೂಟ್ ಸ್ಕೇರ್ಸಿಟ್ ಅಫೆಕ್ಟೆಡ್ ಏರಿಯಾ ಆಗಿರುವುದರಿಂದ 10 ಪರ್‌ಸೆಂಟ್ ಕಂಟ್ರಿಬ್ಯೂಶನ್ ಕೊಡತಕ್ಕದ್ದು ಉದ್ಭವಿಸು ವುದಿಲ್ಲ ಎಂದು ಹೇಳಿ ಎಲ್ಲೆಲ್ಲ ಅಂಥ ಅವಶ್ಯಕತೆ ಇದೆ. ಅವುಗಳ ಬಗ್ಗೆ ಪ್ರೊಪೋಸಲ್ಸ್ ಕಳಿಸ ಬೇಕೆಂದು ಆದೇಶ ಕೊಟ್ಟಿದ್ದೇವೆ.